2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **137/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಸಂತೋಷ್ | | ಪಿಡಬ್ಲೂ - 1 |
| ತಂದೆಯ ಹೆಸರು | - ಮಂಜುನಾಥ | | ಸಿಡಬ್ಲೂ - 1 |
| ವಯಸ್ಸು | - 25 ವರ್ಷ | | |
| ಉದ್ಯೋಗ | - ಖಾಸಗಿ ಕೆಲಸ | | |
| ವಾಸ ಸ್ಥಳ | - ಚಿಕ್ಕಮಗಳೂರು | | |

ದಿನಾಂಕಃ 30-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(6 ನೇ ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲವೆಂದು ಆತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ)

ಮುಖ್ಯ ವಿಚಾರಣೆ ಮಾನ್ಯ ಪ್ರಭಾರ ಪಿ.ಪಿ. ರವರಿಂದ -

1. ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 1 ನೇ ಆರೋಪಿ ಕುಮಾರ್, 3 ನೇ ಆರೋಪಿ ಚಂದ್ರು ಸಿಂಗ್ ಮತ್ತು 5 ನೇ ಆರೋಪಿ ಕಿರಣ್ ಇವರನ್ನು ನಾನು ನೋಡಿರುತ್ತೇನೆ. 3 ನೇ ಆರೋಪಿ ಚಂದ್ರು ಸಿಂಗ್ ನಾನು ಕೆಲಸ ಮಾಡುತ್ತಿದ್ದ ಶ್ರೀರಾಮ್ Agency ಚಿಕ್ಕಮಗಳೂರು ಇಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು. 1 ಮತ್ತು 5 ನೇ ಆರೋಪಿ ಇವರುಗಳನ್ನು ನಾನು ಆಲ್ದೂರು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ನನಗೆ ಚಾಸಾ.2 ವಿಶ್ವಾಸ್ ಇವರು ನನಗೆ ಗೊತ್ತು, ಇವರು ಶ್ರೀರಾಮ್ Agency ಯಲ್ಲಿ

ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದರು. ಚಾಸಾ.3 ಆದೀತ್ಯ ಶೆಟ್ಟಿ ಇವರು ನನಗೆ ಗೊತ್ತು, ಅವರು ಶ್ರೀರಾಮ್ Agency ಯ ಮಾಲೀಕರು ಇರುತ್ತಾರೆ. ಚಾಸಾ.7 ದಾವಲ್ ಸಾಬ್ @ ದಾವುದ್, ಚಾಸಾ.8 ಶಶಿ ಇವರು ನನಗೆ ಗೊತ್ತು, ಸದರಿಯವರು ಶ್ರೀರಾಮ್ Agency ಯಲ್ಲಿ ಕೆಲಸ ಮಾಡುತ್ತಿದ್ದರು.

2. ನಾನು ಶ್ರೀರಾಮ್ Agency ಗೆ ಕೆಲಸಕ್ಕೆ 2012 ರಲ್ಲಿ ಸೇರಿಕೊಂಡಿದ್ದು, ಒಂದು ವರ್ಷ ಅಲ್ಲಿ Dispatch ಕೆಲಸ ಮಾಡಿರುತ್ತೇನೆ. ನಂತರ 2013 ರಿಂದ 2017 ರವರೆಗೆ ಸದರಿ ಶ್ರೀರಾಮ್ Agency ಯಲ್ಲಿ Cashier ಆಗಿ ಕೆಲಸ ಮಾಡಿದ್ದೇನೆ. ನಮ್ಮ ಶ್ರೀರಾಮ್ Agency ಯಿಂದ ಬೇರೆ ಬೇರೆ ಅಂಗಡಿಗಳಿಗೆ ಸೋಪು, ಶಾಂಪು ಮತ್ತು ಇತ್ಯಾದಿಗಳನ್ನು ಕೊಟ್ಟು ಸದರಿ ಅಂಗಡಿಗಳಿಂದ ಹಣವನ್ನು ಪಡೆದು ಶ್ರೀರಾಮ್ Agency ಮಾಲೀಕರ Account ಗೆ ಜಮಾ ಮಾಡುವ ಕೆಲಸ ಮಾಡುತ್ತಿದ್ದೆನು. ಈ ಪ್ರಕರಣದ ಘಟನೆಯಾಗುವ ಒಂದು ತಿಂಗಳ ಮೊದಲ 3 ನೇ ಆರೋಪಿ ಚಂದ್ರು ಸಿಂಗ್ ಚಾಲಕನಾಗಿ ಶ್ರೀರಾಮ್ Agency ಗೆ ಸೇರಿಕೊಂಡಿದ್ದನು. ಆತನು ಐಶರ್ ಗೂಡ್ಸ್ ನಂಬರ್ ಕೆ.ಎ.19/ಎ.9128 ವಾಹನವನ್ನು ಚಲಾಯಿಸುತ್ತಿದ್ದನು.

3. ದಿಃ 21.08.2015 ರಂದು ಆ ದಿನ ಶುಕ್ರವಾರ ಇದ್ದು ಆ ದಿನ

ಬೆಳಿಗ್ಗೆ ಚಿಕ್ಕಮಗಳೂರಿನ ನಮ್ಮ ಕಚೇರಿಯಿಂದ ಶೃಂಗೇರಿ ಕಡೆಗೆ ಸೋಪು, ಶಾಂಪು ಇವುಗಳನ್ನು ಸರಬರಾಜು ಮಾಡಲು ಐಶರ್ ಗೂಡ್ಸ್ ನಂಬರ್ ಕೆ.ಎ.19/ಎ.9128 ವಾಹನದಲ್ಲಿ ನಾನು ಚಾಸಾ.7 ದಾವುದ್, ಚಾಸಾ.8 ಶಶಿ ಮತ್ತು ಸದರಿ ವಾಹನದ ಚಾಲಕರಾಗಿ 3 ನೇ ಆರೋಪಿ ಚಂದ್ರು ಸಿಂಗ್ ಹೊರಟಿದ್ದೆವು. ನಾವು ಆಲ್ದೂರು ಮಾರ್ಗವಾಗಿ ಆ ದಿನ ಸದರಿ ವಾಹನದಲ್ಲಿ ಹೊರಟಿದ್ದೆವು. ಮೊದಲು ಆಲ್ದೂರು ಮುಖಾಂತರ ಬಾಳೆಹೊನ್ನುರಿಗೆ ಹೋಗಿದ್ದು, ಬಾಳೆಹೊನ್ನೂರಿನಲ್ಲಿ ಕೆಲವು ಅಂಗಡಿಗಳಿಗೆ ಸಾಮಾನುಗಳನ್ನು ಕೊಟ್ಟು ಸದರಿ ಅಂಗಡಿಗಳಿಂದ ಒಂದು ಲಕ್ಷ ರೂಪಾಯಿ ನಗದು collection ಆಗಿದ್ದು, ಅದನ್ನು ತೆಗೆದುಕೊಂಡು ನನ್ನ ಹತ್ತಿರ ಬ್ಯಾಗಿನೊಳಗೆ ಇಟ್ಟುಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ 1.30 ಗಂಟೆಗೆ ಬಾಳೆಹೊನ್ನೂರಿನ corporation bank ನಲ್ಲಿ ನಮ್ಮ ಮಾಲೀಕರಾದ ಆದೀತ್ಯ ಶೆಟ್ಟಿ ಇವರ Bank Account ಗೆ ಸದರಿ ಒಂದು ಲಕ್ಷ ಹಣವನ್ನು ಜಮಾ ಮಾಡಿರುತ್ತೇನೆ.

4. ನಂತರ ಬಾಳೆಹೊನ್ನೂರಿನಿಂದ ಜಯಪುರ ಮತ್ತು ಹರಿಹರಪುರದಲ್ಲಿ ಕೆಲವು ಅಂಗಡಿಗಳಿಗೆ ಸಾಮಾನುಗಳನ್ನು ಕೊಟ್ಟು, ಅಲ್ಲಿಯು ಸಹ ನಗದು ಹಣವನ್ನು ಪಡೆದು, ನಂತರ ಶೃಂಗೇರಿಗೆ ಹೋಗಿರುತ್ತೇವೆ. ಶೃಂಗೇರಿಯಲ್ಲಿಯು ಸಹ ಸಾಮಾನುಗಳನ್ನು ಸರಬರಾಜು ಮಾಡಿ ನಗದು ಹಣ

ಪಡೆದಿರುತ್ತೇವೆ. ಜಯಪುರ, ಹರಿಹರಪುರ ಮತ್ತು ಶೃಂಗೇರಿಯಲ್ಲಿ Collection ಮಾಡಿದ ಹಣ ಅಂದಾಜು 3 ಲಕ್ಷ ಆಗಿದ್ದು, ಅದನ್ನು ನನ್ನ ಬ್ಯಾಗಿನಲ್ಲಿ ಇಟ್ಟುಕೊಂಡಿದ್ದೆನು. ಆ ದಿನ ರಾತ್ರಿ 9.00 ಗಂಟೆಗೆ ಶೃಂಗೇರಿಯನ್ನು ಬಿಟ್ಟು ರಾತ್ರಿ 10.30 ಗಂಟೆಗೆ ಜೇನುಗದ್ದೆಯಲ್ಲಿ ಊಟ ಮಾಡುವ ಉದ್ದೇಶದಿಂದ ಒಂದು ಮುಸ್ಲಿಂ ಹೋಟೇಲ್ ಹತ್ತಿರ ನಮ್ಮ ಗಾಡಿಯನ್ನು ನಿಲ್ಲಿಸಿರುತ್ತೇವೆ. ನಾವು 4 ಜನ ಹೊಟೇಲ್ ನಲ್ಲಿ ಊಟ ಮುಗಿಸಿಕೊಂಡಿದ್ದು, ಹಣ ಇರುವ ಬ್ಯಾಗ್ ನನ್ನ ಹತ್ತಿರವೇ ಇತ್ತು. ನಂತರ 10.45 ಗಂಟೆಗೆ ಊಟ ಮುಗಿಸಿಕೊಂಡು ವಾಹನದಲ್ಲಿ ನಾವು 4 ಜನ ವಾಪಸ್ಸು ಚಿಕ್ಕಮಗಳೂರು ಕಡೆಗೆ ಆಲ್ದೂರು ಮಾರ್ಗವಾಗಿ ಬರುತ್ತಿರುವಾಗ ಕೂದುವಳ್ಳಿ ಗ್ರಾಮದ ಹತ್ತಿರ ರಸ್ತೆಯಲ್ಲಿ ರಾತ್ರಿ ಸುಮಾರು 11.30 ಗಂಟೆ ಸಮಯದಲ್ಲಿ ನಮ್ಮ ವಾಹನದ ಹಿಂದಿನಿಂದ ಒಂದು ಪಲ್ಸರ್ ಬೈಕ್ ಬಂದು ನಮ್ಮ ಐಶರ್ ವಾಹನಕ್ಕೆ ಅಡ್ಡ ಹಾಕಿರುತ್ತದೆ. ಸದರಿ ಬೈಕ್ ನಲ್ಲಿ 3 ಜನ ಆಸಾಮಿಗಳು ಇದ್ದರು. ಅವರು ನಮ್ಮ ವಾಹನಕ್ಕೆ ಅಡ್ಡ ಹಾಕಿದಾಗ ನಮ್ಮ ಐಶರ್ ವಾಹನದ ಚಾಲಕ ಚಂದ್ರು ಸಿಂಗ್ ನಮ್ಮ ವಾಹನವನ್ನು ನಿಲ್ಲಿಸಿರುತ್ತಾನೆ. ಬೈಕ್ ನಲ್ಲಿ ಬಂದ 3 ವ್ಯಕ್ತಿಗಳು ತಮ್ಮ ತಮ್ಮ ಮುಖಕ್ಕೆ ಮಂಕಿ ಕ್ಯಾಪ್ ಹಾಕಿಕೊಂಡಿದ್ದು, ಅದರಲ್ಲಿ ಇಬ್ಬರು ಆಸಾಮಿಗಳು ಬೈಕ್ ಇಳಿದು ಬಂದಿದ್ದು, ನಾನು ವಾಹನದ ಮುಂದಿನ ಭಾಗದ ಎಡಬದಿಯಲ್ಲಿ

ಕುಳಿತುಕೊಂಡಿದ್ದು ಅಲ್ಲಿಗೆ ಒಬ್ಬ ವ್ಯಕ್ತಿಯು ಕತ್ತಿಯನ್ನು ಹಿಡಿದುಕೊಂಡು ನನ್ನ ಹತ್ತಿರ ಬಂದಿರುತ್ತಾನೆ, ಮತ್ತು ಇನ್ನೊಬ್ಬ ವ್ಯಕ್ತಿಯು ಚಾಕುವನ್ನು ಹಿಡಿದುಕೊಂಡು ಚಾಲಕನ ಹತ್ತಿರ ಬಂದಿರುತ್ತಾರೆ. ನನ್ನ ಹತ್ತಿರ ಬಂದ ವ್ಯಕ್ತಿಯು ನಾನು ಕುಳಿತುಕೊಂಡಿದ್ದ ಭಾಗದ ಗ್ಲಾಸ್ ನ್ನು ತನ್ನ ಕತ್ತಿಯಿಂದ ಹೊಡೆದಿದ್ದು ಸದರಿ ಗ್ಲಾಸ್ ಹೊಡೆದು ಹೋಗಿರುತ್ತದೆ. ನಂತರ ಕತ್ತಿ ಹಿಡಿದುಕೊಂಡು ಬಂದ ಸದರಿ ವ್ಯಕ್ತಿಯು ನನಗೆ ಖಾರದ ಪುಡಿಯನ್ನು ಎರಚಿದ್ದು ಅದು ನನ್ನ ಎಡಭಾಗದ ಕಿವಿ ಮತ್ತು ಮುಖಕ್ಕೆ ಬಿದ್ದಿರುತ್ತದೆ. ಸದರಿ ಆಸಾಮಿಯು ಕತ್ತಿಯಿಂದ ಗ್ಲಾಸ್ ನ್ನು ಹೊಡೆದಿದ್ದರಿಂದ ಸದರಿ ಕತ್ತಿಯ ಪೆಟ್ಟು ನನ್ನ ಎಡಗೈ ನ ಮಧ್ಯದ ಬೆರಳಿಗೆ ಒಂದು ಚೂರು ರಕ್ತ ಗಾಯ ವಾಗಿರುತ್ತದೆ. ನಾನು ಆ ಸಮಯದಲ್ಲಿ ನನ್ನ ಕುತ್ತಿಗೆಗೆ ಹಣ, ಬಿಲ್ಲು ಮತ್ತು ನೋಟ್ ಬುಕ್ ಬಿಲ್ ಪುಸ್ತಕ ಇರುವ ಬ್ಯಾಗ್ ನ್ನು ಹಾಕಿಕೊಂಡಿದ್ದು ಸದರಿ ಬ್ಯಾಗ್ ನ್ನು ಕತ್ತಿ ಹಿಡಿದುಕೊಂಡು ಬಂದಿದ್ದ ವ್ಯಕ್ತಿಯು ಎಳೆದುಕೊಂಡು ನನ್ನಿಂದ ಕಿತ್ತುಕೊಂಡಿರುತ್ತಾನೆ. ಸದರಿ ಬ್ಯಾಗಿನಲ್ಲಿ ಆ ಸಮಯದಲ್ಲಿ ಅಂದಾಜು 3 ಲಕ್ಷ ನಗದು ಹಣ ಇತ್ತು. ಇನ್ನೊಬ್ಬ ವ್ಯಕ್ತಿಯು ಚಾಕುವನ್ನು ಹಿಡಿದುಕೊಂಡು ನಮ್ಮ ವಾಹನದ ಚಾಲಕ ಚಂದ್ರು ಸಿಂಗ್ ಈತನ ಕುತ್ತಿಗೆಗೆ ಹಿಡಿದುಕೊಂಡು ಸ್ವಲ್ಪ ಆತನ ಶರ್ಟು ಎಳೆದಾಡಿರುತ್ತಾನೆ. ನಂತರ ಸದರಿ 3 ವ್ಯಕ್ತಿಗಳು ತಾವು ತಂದಿದ್ದ ಬೈಕ್ ನಲ್ಲಿ ನನ್ನ ಹಣವಿದ್ದ ಬ್ಯಾಗ್ ನ್ನು ತೆಗೆದುಕೊಂಡು

ಹೋಗಿರುತ್ತಾನೆ.

5. ನಂತರ ನಮ್ಮ ಮಾಲೀಕರಾದ ಚಾಸಾ.3 ಆದೀತ್ಯ ಶೆಟ್ಟಿ ಇವರಿಗೆ ಘಟನೆಯ ಬಗ್ಗೆ ತಿಳಿಸಿರುತ್ತೇನೆ. ನಂತರ ಅವರು ನಮಗೆ ಆಸ್ಪತ್ರೆಗೆ ಮೊದಲು ಹೋಗಿ ಚಿಕಿತ್ಸೆ ಪಡೆಯಿರಿ ಎಂದು ಹೇಳಿ ನಂತರ ದೂರನ್ನು ಕೊಡೋಣ ಎಂದು ತಿಳಿಸಿದರು. ಆ ಪ್ರಕಾರ ಸದರಿ ವಾಹನದಲ್ಲಿಯೇ ನಾವು 4 ಜನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಹೋಗಿದ್ದು, ಆಗ ಸಮಯ ಮಧ್ಯ ರಾತ್ರಿ 12.15 ಗಂಟೆಯಾಗಿತ್ತು. ಸದರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿದ್ದು, ಮರು ದಿನ ಅಂದರೆ ದಿಃ 22.08.2015 ರಂದು ಬೆಳಿಗ್ಗೆ ಅಲ್ಲಿಂದ ಹೊರಟು ಆಲ್ದೂರು ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಸದರಿ ಪೊಲೀಸ್ ಠಾಣೆಯಲ್ಲಿ ಸದರಿ ಘಟನೆಯ ಬಗ್ಗೆ 3 ಜನ ಆಸಾಮಿಗಳ ವಿರುದ್ಧ ಬೆಳಿಗ್ಗೆ 8.30 ಗಂಟೆಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನನ್ನ ಕೈಬರಹದಿಂದ ಬರೆದಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಆಲ್ದೂರು ಪೊಲೀಸರು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ

ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

6. ನಂತರ ಅದೇ ದಿನ ಸುಮಾರು 10.30 ಗಂಟೆಗೆ ನಾನು ಆಲ್ದೂರು ಪೊಲೀಸರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಅವರಿಗೆ ಸ್ಥಳವನ್ನು ತೋರಿಸಿರುತ್ತೇನೆ. ಘಟನಾ ಸ್ಥಳಕ್ಕೆ ನಾನು, ನಮ್ಮ ಮಾಲೀಕರಾದ ಆದೀತ್ಯ ಶೆಟ್ಟಿ, ಮ್ಯಾನೇಜರ್ ವಿಶ್ವಾಸ್ ರವರೊಂದಿಗೆ ಹೋಗಿರುತ್ತೇನೆ. ನಾನು ಘಟನಾ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಅಲ್ಲಿ ಪೊಲೀಸರು ಸ್ಥಳದಲ್ಲಿ ಬಿದಿದ್ದ ವಾಹನ ಗ್ಲಾಸ್ ಚೂರುಗಳನ್ನು ಮತ್ತು ಚೂರು ಒಪನ್ ಆಗಿದ್ದ ಕವರ್ ನಲ್ಲಿ ಇದ್ದ ಸ್ವಲ್ಪ ಖಾರದ ಪುಡಿ ಇದುದ್ದನ್ನು ನೋಡಿ ಪರಿಶೀಲಿಸಿ ಅವುಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಕೃತ್ಯ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಸದರಿ ವಸ್ತುಗಳನ್ನು ಪೊಲೀಸರು ಕೃತ್ಯ ಸ್ಥಳದಿಂದ ತೆಗೆದುಕೊಂಡು ಬಂದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಗ್ಲಾಸ್ ಚೂರು ಮತ್ತು ಖಾರದ ಪುಡಿಯನ್ನು ಪೊಲೀಸರು ಪಡೆದುಕೊಳ್ಳುವಾಗ ಮಹಜರ್ ಕಾಲಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಮಹಜರ್ ನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ, ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ

ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಆ ದಿನ ಪೊಲೀಸರು ನಮ್ಮ ಸಮಕ್ಷಮ ಗ್ಲಾಸ್ ಚೂರು ಮತ್ತು ಖಾರದ ಪುಡಿಯನ್ನು ಕೃತ್ಯ ಸ್ಥಳದಿಂದ ವಶಪಡಿಸಿಕೊಂಡಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ದೊಡ್ಡ ಪ್ಲಾಸ್ಟಿಕ್ ಪಾಕೇಟ್ ನಲ್ಲಿ ಇದ್ದ ಚಿಕ್ಕ ಪ್ಲಾಸ್ಟಿಕ್ ಪಾಕೇಟ್ ನಲ್ಲಿ ಇರುವ ಖಾರದ ಪುಡಿ ಮತ್ತು ಇನ್ನೊಂದು ಚಿಕ್ಕ ಪ್ಲಾಸ್ಟಿಕ್ ಪಾಕೇಟ್ ನಲ್ಲಿ ಇರುವ ಗ್ಲಾಸ್ ಚೂರುಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸುತ್ತಾರೆ. ಪ್ಲಾಸ್ಟಿಕ್ ಪಾಕೇಟ್ ನಲ್ಲಿ ಇರುವ ಖಾರದ ಪುಡಿಯನ್ನು ಮು.ಮಾ.1 ಎಂದು ಮತ್ತು ಇನ್ನೊಂದು ಪ್ಲಾಸ್ಟಿಕ್ ಪಾಕೇಟ್ ನಲ್ಲಿ ಇರುವ ಗ್ಲಾಸ್ ಚೂರುಗಳನ್ನು ಮು.ಮಾ.2 ಎಂದು ಗುರುತಿಸಲಾಯಿತು.

7. ಕೃತ್ಯ ಸ್ಥಳ ಇರುವ ಪ್ರದೇಶವು ಕೂದುವಳ್ಳಿ ಗ್ರಾಮದ Alfonso ರವರ ತೋಟದ ರಸ್ತೆಯಾಗಿರುತ್ತದೆ. ಸದರಿ ಜಾಗವನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಕೃತ್ಯ ನಡೆದ ಸಮಯದಲ್ಲಿ ಒಬ್ಬ ವ್ಯಕ್ತಿ ನನಗೆ ಕತ್ತಿಯನ್ನು ತೋರಿಸಿ ನನ್ನ ಬ್ಯಾಗ್ ನ್ನು ದೋಚಿದ್ದು ಇನ್ನೊಬ್ಬ ವ್ಯಕ್ತಿ ನಮ್ಮ ವಾಹನದ ಚಾಲಕನಿಗೆ ಚಾಕುವನ್ನು ತೋರಿಸಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿಯು ಸದರಿ ಕತ್ತಿ ಮತ್ತು ಚಾಕು ಇವುಗಳನ್ನು ನೋಡಿ ಗುರುತಿಸಿದ್ದು ಕತ್ತಿಯನ್ನು

ಮು.ಮಾ.3 ಎಂದು ಮತ್ತು ಚಾಕುವನ್ನು ಮು.ಮಾ.4 ಎಂದು ಗುರುತಿಸಲಾಯಿತು. ಆ ದಿನ ನಾವು ಐಶರ್ ವಾಹನದಲ್ಲಿ ಹೋಗಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಅದರಲ್ಲಿ ತಾವುಗಳು ಘಟನೆ ಸಮಯದಲ್ಲಿ ಹೋಗುತ್ತಿದ್ದ ವಾಹನ ಇರುವ ಬಗ್ಗೆ ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ನಿ.ಪಿ.4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಂದು ವರೆದ ಮುಖ್ಯ ವಿಚಾರಣೆಯನ್ನು ಮಾನ್ಯ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ

<u>ಪಾಟೀ ಸವಾಲು ಶ್ರೀ ಎಂ.ಆರ್.ವೈ. ವಕೀಲರಿಂದ – ಆರೋಪಿತನ ಪರವಾಗಿ</u>

8.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ